ಆರೋಗ್ಯ ಕವಚ ಯೋಜನೆ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :5 (23)

ಶ್ರೀ ಅಪ್ಪಾಜಿ @ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ್)
ಅ) ರಾಜ್ಯದಲ್ಲಿರುವ 108 ಆರೋಗ್ಯ ಕವಚ ಯೋಜನೆಗೆ ಕಳೆದ ವರ್ಷದಲ್ಲಿ ಒದಗಿಸಿದ ಅನುದಾನವೆಷ್ಟು (ಸಂಪೂರ್ಣ ಮಾಹಿತಿ ಒದಗಿಸುವುದು);
ಆ) 108 ಆರೋಗ್ಯ ಕವಚ ಯೋಜನೆಯಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು;
ಇ) 108 ಆರೋಗ್ಯ ಕವಚ ಯೋಜನೆಯಡಿ ಸೇವೆ ಸಲ್ಲಿಸುತ್ತಿರುವವರನ್ನು ಖಾಯಂಗೊಳಿಸುವ ಪ್ರಾಸ್ತಾವನೆ ಸರ್ಕಾರದ ಮುಂದಿದೆಯೇ? (ಸಂಪೂರ್ಣ ವಿವರ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
ಅ) ಆರೋಗ್ಯ ಕವಚ 108 ಯೋಜನೆಗೆ 2011–12 ನೇ ಸಾಲಿನಲ್ಲಿ ಒದಗಿಸಿರುವ ಒಟ್ಟಾರೆ ಅನುದಾನ ರೂ. 5182–40 ಲಕ್ಷಗಳು. ಅದರಲ್ಲಿ ಎನ್.ಆರ್.ಹೆಚ್.ಎಂ. ಪಾಲು ರೂ. 3182.40 ರೂ. ಲಕ್ಷಗಳು ಹಾಗೂ ರಾಜ್ಯ ಸರ್ಕಾರದ ಪಾಲು ರೂ. 2000.00 ಲಕ್ಷಗಳು.
ಆ) ಈ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ– 2772.
ಇ) ಇಲ್ಲ.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ (ಮುದ್ದೇಬಿಹಾಳ): ಮಾನ್ಯ ಅಧ್ಯಕ್ಷ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. 108 ಆರೋಗ್ಯ ಕವಚ ಯೋಜನೆ ಅಡಿಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದೆ. ಅದಕ್ಕಾಗಿ ರಾಜ್ಯ ಸರ್ಕಾರ 20 ಕೋಟಿ ರೂಪಾಯಿಯನ್ನು ಖರ್ಚು ಮಾಡುತ್ತಿದೆ.

ಕೇಂದ್ರ ಸರ್ಕಾರದಿಂದ 31 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ ಎನ್ನುವ ಅಂಕಿ–ಅಂಶಗಳನ್ನು ಕೊಟ್ಟಿದ್ದಾರೆ. ಮೊದಲನೆ ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳಲು ಇಚ್ಛಿಪಡುತ್ತೇನೆ. ಇಂತಹ ಒಂದು ಮಹತ್ವವಾದಂತಹ ಕಾರ್ಯಕ್ರಮ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಒಂದು ಯೋಜನೆ ಇದ್ದಂತಹ ಸಂದರ್ಭದಲ್ಲಿ, 108ನೇ ವಾಹನಗಳ ಮೇಲೆ ನಮ್ಮ ದೇಶದ ಪ್ರಧಾನ ಮಂತ್ರಿಗಳ ಭಾವಚಿತ್ರ ಎಲ್ಲಿಯೂ ಇಲ್ಲ. It is nothing but showing dis-respect to the Union Government. Are we not a part of Union Government? ನಾವು ಭಾರತೀಯರು ಎಂದು ಅಂದುಕೊಳ್ಳಬೇಕಾದರೆ, ಮೊದಲು ನಮ್ಮ ಪ್ರಧಾನ ಮಂತ್ರಿಯವರು, ಯಾವ ಪಕ್ಷದವರು ಎನ್ನುವುದ ಮುಖ್ಯವಲ್ಲ. ಅವರ ಬಗ್ಗೆ ಗೌರವ ಕೊಡತಕ್ಕಂಥದ್ದು ನಮ್ಮ ಒಂದು ಧರ್ಮ. ಏಕೆ ಇದನ್ನು ತಾವು ಮಾಡುತ್ತಿಲ್ಲ ಎನ್ನುವುದು ನನ್ನ ಮೊದಲನೆಯ ಪ್ರಶ್ನೆ. ಅದನ್ನು ಕೂಡಲೇ ಮಾಡಬೇಕು. ಅದಕ್ಕೆ ನಿಖರವಾದಂತಹ ಉತ್ತರ ಕೊಡಬೇಕು. ಎರಡನೆಯದಾಗಿ, ಈ ಯೋಜನೆಯಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ಎನ್ನುವ ಪ್ರಶ್ನೆಗೆ 2,772 ಎಂದು ಉತ್ತರ ಕೊಟ್ಟಿದ್ದಾರೆ. ಇವರು ಹೇಗೆ ಮಾಡಿದ್ದಾರೆ ಎಂದರೆ, ಇದನ್ನು ಗುತ್ತಿಗೆ ಆಧಾರದ ಮೇಲೆ ಬೇರೆಯವರಿಗೆ ಕೊಟ್ಟಿದ್ದಾರೆ. ಸರ್ಕಾರದ ಸಿಬ್ಬಂದಿ ಅಲ್ಲಿ ಇಲ್ಲವೇ ಇಲ್ಲ. ಅವರ ಮುಂದಿನ ಭವಿಷ್ಯದ ಗತಿ ಏನು? ಅಲ್ಲಿ ರೋಸ್ಟರ್ follow ಆಗುವುದಿಲ್ಲ, ಯಾವುದೂ ಆಗುವುದಿಲ್ಲ. ಇದರಿಂದ ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ, ಎಸ್.ಸಿ/ಎಸ್.ಟಿ ಜನಾಂಗಕ್ಕೆ ಒಂದು ದೊಡ್ಡ ಅನ್ಯಾಯವನ್ನು ನೀವು ಎಸಗುತ್ತಿದ್ದೀರಿ. ಅವರಿಗೆ service guarantee ಯೂ ಇಲ್ಲ. ಮಾನ್ಯ ಅಧ್ಯಕ್ಷತೆ ಆ ವಾಹನಗಳ ಪರಿಸ್ಥಿತಿ ಹೇಗಿದೆ ಅಂದರೆ ಅದನ್ನು ನೀವು ನಂಬಲಿಕ್ಕೆ ಆಗುವುದಿಲ್ಲ. ಅವುಗಳಿಗೆ ಸರಿಯಾದಂತಹ tyre ಇಲ್ಲ. Servicing ಇಲ್ಲ. ಎಲ್ಲಿ ಬೇಕೆಂದರೆ ಅಲ್ಲಿ ರಸ್ತೆಗಳಲ್ಲಿ ನಿಂತುಕೊಳ್ಳುತ್ತವೆ. ಹಲವಾರು ಬಾರಿ accidentsಆಗಿವೆ. ಈ ರೀತಿಯಾಗಿ ವಾಹನಗಳ ಮೇಲೆ periodical inspection ಕೂಡ ಇಲ್ಲ. ಯಾರು ಗುತ್ತಿಗೆದಾರರು ವಾಹನವನ್ನು

ತೆಗೆದುಕೊಂಡಿದ್ದಾರೋ ಅವರು ಕೇವಲ ವ್ಯಾವಹಾರಿಕವಾಗಿ ಮಾಡುತ್ತಿದ್ದಾರೆ. ಇದು service oriented ಅಲ್ಲ. ಅವರು ದುಡ್ಡು ಸಂಪಾದನೆ ಮಾಡಲಿಕ್ಕೆ ಇದೊಂದು ನೆಪದ ರೀತಿ ಆಗಿದೆ. ಆದ್ದರಿಂದ ಈ ಮೂರು ಪ್ರಶ್ನೆಗಳಿಗೆ ದಯವಿಟ್ಟು ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮೊದಲನೆ ಪ್ರಶ್ನೆಗೆ ಕೊನೆಯಲ್ಲಿ ಉತ್ತರ ಕೊಡುತ್ತೇನೆ. ಅದು ಸ್ವಲ್ಪ ರಾಜಕೀಯ ಪ್ರಶ್ನೆಯ ಉತ್ತರವಾಗುತ್ತದೆ. ಅದು ಬೇಡ. ಮಾನ್ಯ ಸದಸ್ಯರು ಸರ್ಕಾರಿ ಕೆಲಸದ ಬಗ್ಗೆ ರೋಸ್ಟರ್ follow ಆಗಿಲ್ಲವೆಂದು ಹೇಳಿದರು. ಅದನ್ನು outsource ಮಾಡಿದ್ದೇವೆ. ಬೇರೆ ಬೇರೆ ರಾಜ್ಯಗಳಲ್ಲಿಯೂ ಸಹ ಇದೇ ಪದ್ಧತಿಯಲ್ಲಿಯೇ emergency service ನ vehicle ಗಳು ಓಡುತ್ತಿವೆ. ಕರ್ನಾಟಕದಲ್ಲಿಯೂ ಕೂಡ 2008ರಲ್ಲಿ ಈ ವ್ಯವಸ್ಥೆ ಜಾರಿಗೆ ಬಂದಿದೆ. GVK-EMRI ಸಂಸ್ಥೆಯವರು ಇದನ್ನು Out-source ನಲ್ಲಿ ನಡೆಸುತ್ತಿದ್ದಾರೆ. ಕರ್ನಾಟಕದಲ್ಲಿ 517 ಆಂಬ್ಯುಲೆನ್ಸ್‌ಗಳು ಇವೆ. ಇದರಲ್ಲಿ 2,772 ಜನರು ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ, 31 ಕೋಟಿ ರೂಪಾಯಿ NRHM ಅಡಿಯಲ್ಲಿ ನಮ್ಮ ಪಾಲಿಗೆ ಬಂದಿದೆ. ಇದಕ್ಕೆ ರಾಜ್ಯ ಸರ್ಕಾರ 20 ಕೋಟಿ ರೂಪಾಯಿ ಕೊಟ್ಟಿದೆ. ಹೀಗಾಗಿ ವ್ಯವಸ್ಥಿತವಾಗಿ ನಡೆಯುತ್ತಿದೆ. ಸರ್ಕಾರದ ಪಾಲಿಸಿ ಏನಾದರೂ ಬದಲಾಗಿ, ಇವರನ್ನು ಸರ್ಕಾರದ ನೌಕರಸ್ಥರನ್ನಾಗಿ ತೆಗೆದುಕೊಳ್ಳಬೇಕೆಂದು ನಿರ್ಧಾರವಾದರೆ, ನಿಶ್ಚಿತವಾಗಿ ಬರುವ ದಿನಗಳಲ್ಲಿ ಅವರನ್ನು ರೋಸ್ಟರ್ ಅಥವಾ ಮತ್ತೊಂದು ಸರ್ಕಾರಿ ವ್ಯವಸ್ಥೆಯೊಳಗೆ ನಡೆಸುವುದರ ಬಗ್ಗೆ ನಮ್ಮ ಸರ್ಕಾರವಾಗಲಿ ಅಥವಾ ಯಾವುದೇ ಸರ್ಕಾರವಾಗಲಿ ಚಿಂತನೆ ಮಾಡಬೇಕಾಗಿರುವುದು ಅಗತ್ಯ ಎಂಬುದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಇವರ service ಅನ್ನು ಯಾರೂ ಕೂಡ ಕಡೆಗಣಿಸುವಂತಿಲ್ಲ. ನಾನು ಒಂದು ಸಭೆಯಲ್ಲಿ, ಮಿಲಿಟರಿ ಸರ್ವೀಸ್‌ನಲ್ಲಿ ಯಾವ ರೀತಿ ಮಾಡುತ್ತಾರೆ ಅದೇ ರೀತಿಯ ಸಿಸ್ಟಂ ಅನ್ನು ಇವರಿಗೂ ತರಬೇಕೆನ್ನುವ ಸಲಹೆಯನ್ನೂ ಕೂಡ ನಾನು ಕೊಟ್ಟೆ. ಏಕೆಂದರೆ ಅವರು 24X7 ಕೆಲಸ ಮಾಡುತ್ತಾರೆ. ಆ

ಹಿನ್ನೆಲೆಯಲ್ಲಿ ಬರುವಂತಹ ದಿನಗಳಲ್ಲಿ ಪರಿಶೀಲಿಸಬೇಕೆಂದು ನನ್ನದೂ ಯೋಚನೆ ಇದೆ. ಎರಡನೆಯದಾಗಿ ವಾಹನಗಳ ಪರಿಸ್ಥಿತಿ ದುಸ್ಥಿತಿಯಲ್ಲಿದೆ ಎಂದು ಕೇಳಿದರು. ಕೆಲವು ವಾಹನಗಳನ್ನು vigilance department ನವರು surprise visit ಮಾಡುತ್ತಾರೆ. ಬಹಳ ಶೋಚನೀಯ ಪರಿಸ್ಥಿತಿಯಲ್ಲಿರುವ ವಾಹನಗಳು ಯಾವುದು ಇರುತ್ತವೆ· ಅವುಗಳನ್ನು World Bank ನ ಯೋಜನೆಯಡಿ replace ಮಾಡುತ್ತಿದ್ದೇವೆ. ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಏನು ಆಂಬ್ಯುಲೆನ್ಸ್‌ಗಳಿವೆ ಅವುಗಳೂ ಕೂಡ ಬಹಳಷ್ಟು ಶೋಚನೀಯ ಸ್ಥಿತಿಯಲ್ಲಿವೆ. ಅವುಗಳನ್ನೂ ಸಹ ಸರಿಪಡಿಸಿ, 43 ಆಸ್ಪತ್ರೆಗಳಿಗೆ ಬೇಕಾಗುವಂತಹ ಆಂಬ್ಯುಲೆನ್ಸ್‌ಗಳನ್ನು ಹಾಗೂ 517 ನಲ್ಲಿ 150 ವಾಹನಗಳನ್ನು replace ಮಾಡಿ ಸರಿಯಾದಂತಹ ವಾಹನಗಳನ್ನು ತರಬೇಕಾದ tender process ಜಾರಿಯಲ್ಲಿದೆ. ಮೊದಲನೆಯದಾಗಿ, 108 ಸಂಖ್ಯೆಯ ವಾಹನಗಳ ಮೇಲೆ ಮಾನ್ಯ ಪ್ರಧಾನ ಮಂತ್ರಿಯವರ ಭಾವಚಿತ್ರವಿಲ್ಲ ಎನ್ನುವ ಬಹಳ ಮುಖ್ಯವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದರು. ಇದೇ ಸದನದಲ್ಲಿ ಈ ಹಿಂದೆ ಗಲಾಟೆ ಮಾಡಿ, ನಮ್ಮ ರಾಜ್ಯ ಮುಖ್ಯಮಂತ್ರಿಗಳು ಮತ್ತು ಆರೋಗ್ಯ ಸಚಿವರ ಫೋಟೋ ತೆಗೆದು ಹಾಕಬೇಕೆಂದು ವಿರೋಧ ಪಕ್ಷದವರು ಸಲಹೆ ಕೊಟ್ಟರು. ಹಾಗಾಗಿ ಇವತ್ತು ಆ ವಾಹನದ ಮೇಲೆ ಯಾರ ಫೋಟೋಗಳೂ ಇಲ್ಲ. Confusion ಏಕೆ ಆಗಿದೆ ಎಂದರೆ, ಹಿಂದೆ National Highway ನಿರ್ಮಾಣವಾದಾಗ, ನಾವೆಲ್ಲಾ ಮಾನ್ಯ ಅಟಲ್‌ಜೀಯವರ ಫೋಟೋವನ್ನು ಹಾಕಿದ್ದೆವು. ನಿರ್ಮಾಣವಾದ ಮೇಲೆ UPA ಸರ್ಕಾರ ಬಂದಿತು. 69 ಕೋಟಿ ರೂಪಾಯಿ ಖರ್ಚು ಮಾಡಿ ವಾಜಪೇಯಿಯವರ ಫೋಟೋವನ್ನು ಕಿತ್ತುಹಾಕಿಸಿ ಸೋನಿಯಾಗಾಂಧಿ ಹಾಗೂ ಪ್ರಧಾನಮಂತ್ರಿಯವರ ಫೋಟೋವನ್ನು ಇವರು ಹಾಕಿದ್ದಾರೆ. ಎಷ್ಟು ರಾಜಕೀಯವಾಗಿದೆ ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಆ ಪ್ರಮಾಣದಲ್ಲಿ ರಾಜಕೀಯ ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಯವರ ಫೋಟೋವನ್ನು ಹಾಕಿ ಎಂದು ಅವರು ಹೇಳಿದ್ದರೆ, ಆರೋಗ್ಯ ಸಚಿವರದ್ದೂ ಫೋಟೋ ಹಾಕಿ ಎಂದು ಸಲಹೆ

ಕೊಟ್ಟಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಹಿಂದೆ ಹಾಕಿರುವುದನ್ನು ಕಿತ್ತು ಹಾಕಿಸಿದ್ದಾರೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಆಂಧ್ರ ಪ್ರದೇಶದಲ್ಲಿ ಇವತ್ತು 108 ಸಂಖ್ಯೆಯ ವಾಹನದ ಮೇಲೆ ರಾಜೀವ್‌ಗಾಂಧಿಯವರ ಫೋಟೋ ಹಾಕಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಸಚಿವರು ಸರ್ಕಾರದಿಂದ ಉತ್ತರ ಕೊಡಬೇಕಾದಾಗ XXXXX ಉತ್ತರ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಬಹಳ ಜವಾಬ್ದಾರಿಯಿಂದಲೇ ಉತ್ತರ ಕೊಡುತ್ತಿದ್ದೇನೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಎಲ್ಲಿ ಕೊಟ್ಟಿದ್ದೀರಿ?

ಅಧ್ಯಕ್ಷರು: ಜವಾಬ್ದಾರಿಯಿಂದ ಉತ್ತರವನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಜಯಚಂದ್ರರವರು ಶಿರಾದಿಂದ National Highwayದಿಂದ ಬರುತ್ತಾರೆ ಅವರು ಹೇಳಲಿ.

(ಗೊಂದಲ)

ಅಧ್ಯಕ್ಷರು: ಉತ್ತರ ಕೊಟ್ಟಿದ್ದೆ ಜವಾಬ್ದಾರಿ ಅಲ್ಲವೆಂದರೆ ಹೇಗೆ? ಅದನ್ನು ಕಡತದಿಂದ ತೆಗೆದುಹಾಕಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಆ ರಿತಿ ಅಲ್ಲ. ಉತ್ತರ ಕೊಟ್ಟಿದ್ದು ಬೇಜವಾಬ್ದಾರಿ ಅಲ್ಲ. ಮಾನ್ಯ ಸಚಿವರು ಮಾತನಾಡಬೇಕಾದರೆ ಏನು ಹೇಳಿದರು ಎಂದರೆ, ಪ್ರಧಾನ ಮಂತ್ರಿಗಳ ಫೋಟೋಗಳನ್ನು ಹಾಕುವಂತಹ ಸಂದರ್ಭದಲ್ಲಿ ಹಿಂದೆ ಸದನದಲ್ಲಿ ಚರ್ಚೆಯಾಗಿದೆ. ಆಗ ಯಾರ

ಫೋಟೋವನ್ನೂ ಹಾಕಬಾರದು ಎಂದು ತೀರ್ಮಾನವಾಗಿದೆ. ಯಾರದ್ದೂ ಹಾಕಿಲ್ಲವೆಂದು ಸಮರ್ಥನೆ ಮಾಡಬೇಕಾದಾಗ, ಹಿಂದೆ ವಾಜಪೇಯಿಯವರದ್ದು ಹಾಕಿದಂತಹ ಫೋಟೋಗಳನ್ನು ತೆಗೆದು ಸೋನಿಯಾ ಗಾಂಧಿಯವರದ್ದು ಹಾಕಿದರು ಎಂದು ಹೇಳಿದರಲ್ಲಾ, ದಯಮಾಡಿ ತಮಗೆ ಜ್ಞಾಪಿಸಿಕೊಡುತ್ತೇನೆ. ಪ್ರಧಾನಮಂತ್ರಿಗಳಾಗಿದ್ದಂತಹ ವಾಜಪೇಯಿಯವರ ಫೋಟೋಗಳನ್ನು ತೆಗೆದು ಹಾಕಬೇಕೆಂದು ತೀರ್ಮಾನ ಮಾಡಿದ್ದು ಚುನಾವಣಾ ಆಯೋಗ. ಚುನಾವಣೆ ಬಂದಿತು. ಆಗ ತೀರ್ಮಾನವಾಯಿತು. ಹಾಗಾಗಿ ಫೋಟೋಗಳನ್ನು ತೆಗೆದರೆ ವಿನಹ, ರೆಕಾರ್ಡ್ಸ್ ತೆಗೆದು ನೋಡಿ, ರಾಜಕೀಯ ಪಕ್ಷವಾಗಿ ನಾವು ಮಾಡಿದ್ದಲ್ಲ.

(ಗೊಂದಲ)

XXಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಸದರಿ ಪದವನ್ನು ಕಡತದಿಂದ ತೆಗೆದು ಹಾಕಲಾಯಿತು.

ಶ್ರೀ ಅರವಿಂದ ಲಿಂಬಾವಳಿ: ಚುನಾವಣಾ ಆಯೋಗ ಖಾಯಂ ಆಗಿ ತೆಗೆದು ಹಾಕಿ ಎಂದು ಹೇಳಿಲ್ಲ. ನನಗೆ ಬಹಳ ಚೆನ್ನಾಗಿ ಗೊತ್ತಿದೆ. ನಾನೂ ಹತ್ತಾರು ಚುನಾವಣೆಗಳನ್ನು ಎದುರಿಸಿದ್ದೇನೆ. ಚುನಾವಣಾ ಆಯೋಗ ಹೇಳುವುದೇನೆಂದರೆ, ಚುನಾವಣೆ ಸಂದರ್ಭದಲ್ಲಿ ಆ ರೀತಿಯ ಫೋಟೋಗಳ ಪ್ರಚಾರ ಆಗಬಾರದೆಂದು ತಡೆಹಿಡಿದಿರುತ್ತಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಹೌದು.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಆದರೆ permanent ಆಗಿ 69 ಕೋಟಿ ರೂಪಾಯಿ ಟೆಂಡರ್ ಮಾಡಿ ಇಡೀ ದೇಶದಲ್ಲಿ ಕಿತ್ತು ಹಾಕಿರತಕ್ಕಂಥ ಅಪಕೀರ್ತಿ ಕಾಂಗ್ರೆಸ್‌ಗೆ ಹೋಗುತ್ತದೆ. ನಿರ್ಮಾಣ ಮಾಡಿದ್ದು ಅಟಲ್‌ಬಿಹಾರಿ ವಾಜಪೇಯಿಯವರು, ಅವರ ಫೋಟೋವನ್ನು ಕಿತ್ತು ಹಾಕಿದ ಅಪಕೀರ್ತಿ ಇವರಿಗೆ ಹೋಗುತ್ತದೆ. ಅದನ್ನು ಅವರು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಹೀಗೆ ಒಂದೊಂದು ಚುನಾವಣೆಗಳು ಬಂದಾಗಲೂ ಕೂಡ ನಾನು ಈ ಬಗ್ಗೆ ಹೇಳಿದ್ದೇನೆ. ಅದರ ಮೇಲೆ ಶ್ರೀರಾಮುಲು ಅವರ Photoಅನ್ನು ಹಾಕಬೇಡಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ Photoಹಾಕಬೇಡಿ ಎಂದು ಹೇಳಿದ್ದೇನೆ. ನಾಳೆ ದಿನ ಬದಲಾವಣೆಯಾದಂತಹ ಸಂದರ್ಭದಲ್ಲಿ ಅದರ ಮೇಲೆ ಕಪ್ಪು ಬಣ್ಣವನ್ನು ಬಳಿಯಬೇಕಾಗುತ್ತದೆ. ಇದಕ್ಕೆ ಬಂಡವಾಳವನ್ನು ಎಲ್ಲಿ ಹಾಕುತ್ತೀರೆಂದು ಸಹ ಕೇಳಿದ್ದೇನೆ. ಸರ್ಕಾರದ ಯಾವುದೇ ಒಂದು ಯೋಜನೆಯಾಗಲಿ, ನಿಮ್ಮದು ಮಾತ್ರ Photoಹಾಕುತ್ತೀರಿ, ಬೇರೆಯವರದು ಹಾಕಬಾರದು ಎಂದು ಹೇಳಿದರೆ ಹೇಗೆ? ಕೇಂದ್ರ ಸರ್ಕಾರ ಹಣವನ್ನು ಇದಕ್ಕಾಗಿ ಕೊಡುತ್ತದೆ ಎಂದು ಉತ್ತರದಲ್ಲಿ ಹೇಳುತ್ತೀರಿ. ಅವರ Photoಅನ್ನು ಏತಕ್ಕಾಗಿ ಹಾಕಬಾರದು?

ಶ್ರೀ ಅರವಿಂದ ಲಿಂಬಾವಳಿ: 108 ಸಂಖ್ಯೆಯ ವಾಹನದ ಮೇಲೆ ಯಾರ Photoಇದೆ ಹೇಳಿ? ಇದಕ್ಕಾಗಿ ರಾಜ್ಯ ಸರ್ಕಾರವೂ ಸಹ 20 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಮಾನ್ಯ ಸದಸ್ಯರಾದ ಶ್ರೀ ಸಿ.ಎನ್. ನಾಡಗೌಡರವರು ಹಿರಿಯ ಸದಸ್ಯರಾಗಿದ್ದಾರೆ. ಅವರು ಪ್ರಧಾನ ಮಂತ್ರಿಗಳ Photoವನ್ನು ಹಾಕಿ, ಮುಖ್ಯಮಂತ್ರಿಗಳ Photoಅನ್ನು ಹಾಕಿ ಇದರ ಜೊತೆಯಲ್ಲಿ ಆರೋಗ್ಯ ಸಚಿವರ Photoಅನ್ನೂ ಹಾಕಿ ಎಂದು ಹೇಳುತ್ತಾರೆಂದು ನಾನು ಭಾವಿಸಿದ್ದೆ. ಆದರೆ ತಾವು ಇದರಲ್ಲಿಯೇ ರಾಜಕಾರಣವನ್ನು ಮಾಡಿದರೆ ಹೇಗೆ? ಎಂದು ಸರಿಯಲ್ಲ.

ಶ್ರೀ.ಟಿ.ಬಿ.ಜಯಚಂದ್ರ: ಹಿಂದೆ Photoಅನ್ನು ಹಾಕಿದ್ದರೋ ಇಲ್ಲವೋ ಹೇಳಿ. ಇದೇ ಬಿಜೆಪಿ ಸರ್ಕಾರವು Photoಅನ್ನು ಹಾಕಿರಲಿಲ್ಲವೆ ಹೇಳಿ. ನೀವು ಸಚಿವರಾದಾಗ ಇಲ್ಲದೆ ಇರಬಹುದು.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ: ತಮಗೆ ಧನ್ಯವಾದಗಳು. ನಾವು ಯಾರ Photoಅನ್ನು ಹಾಕದೆ ಇದ್ದರೂ ಒಳ್ಳೆಯದು. ರಾಷ್ಟ್ರೀಯ ಕಾರ್ಯಕ್ರಮ ಮತ್ತು ರಾಜ್ಯದ ಕಾರ್ಯಕ್ರಮಗಳಲ್ಲಿ ಎರಡಕ್ಕೂ ಗೌರವವನ್ನು ಕೊಡುವಂತಹ ಮತ್ತು ಸೂಚಿಸುವಂತಹದ್ದು ನಮ್ಮ

ಧರ್ಮ. As citizens of India we will have to have this in mind. ಅದನ್ನು ಬಿಟ್ಟು ಯಾರೂ ಏನು ಮಾಡುವುದಕ್ಕಾಗುವುದಿಲ್ಲ. ಹಾಗೆ ಮಾಡಿದರೆ ನಿಜವಾಗಿಯೂ ದೇಶಭಕ್ತಿಯೂ ಇಲ್ಲ. ದೇಶಪ್ರೇಮ ಅನ್ನುವುದು ಯಾವ ವ್ಯಕ್ತಿಗೂ ಇಲ್ಲ. ಇದನ್ನು ತಿಳಿದುಕೊಳ್ಳಬೇಕಾದುದು ನಮ್ಮ ಮೂಲ ಕರ್ತವ್ಯ. ಇನ್ನು ಎರಡನೆಯದಾಗಿ ನೀವು ಏನು ಉತ್ತರವನ್ನು ಕೊಟ್ಟಿದ್ದೀರಿ. ಬೇರೆ ರಾಜ್ಯಗಳಲಿ ಇದೇ ರೀತಿಯಾಗಿ ಈ service-orientedಇರುವುದರಿಂದ ಇದನ್ನೆಲ್ಲಾ outsource ಮಾಡಿದ್ದೇವೆನ್ನುವಂತಹ ಮಾತನನ್ನು ತಾವು ಹೇಳಿದ್ದೀರಿ. ಇದು ರಾಜ್ಯದ ಒಂದು ಪ್ರತಿಷ್ಠಿತವಾದಂತಹ ಕಾರ್ಯಕ್ರಮವಾಗಿ ನಿಮ್ಮ ಪ್ರತಿಯೊಂದು ಭಾಷಣದಲ್ಲಿ ಹೇಳುತ್ತೀರಿ. ಇದನ್ನು ಮುಂದಿನ ಸರ್ಕಾರಗಳು ಕೂಡ ಮುಂದುವರೆಸಿಕೊಂಡು ಹೋಗುವಂತಹದ್ದು ಧರ್ಮ, ಹೌದಾ? This is not a temporary programme,ಮಂತ್ರಿಗಳೇ, ತಾವು ದಯವಿಟ್ಟು ನೆನಪಿನಲ್ಲಿಡಬೇಕಾದುದು ಇದು temporary programme,ಅಲ್ಲ. ಒಂದು ಸರ್ಕಾರ ಬಂತು ಮುಂದೆ ಇದನ್ನು phase out ಮಾಡುತ್ತೇವೆ ಅನ್ನುವುದಲ್ಲ. ಇದು ಶಾಶ್ವತವಾಗಿ ನಿರಂತರವಾಗಿ ನಡೆಯುವಂತಹ ಕಾರ್ಯಕ್ರಮವಾಗಿದೆ. ಇದರ ಬಗ್ಗೆ ತಾವು ಆಲೋಚನೆಯನ್ನು ಮಾಡಬೇಕು. ಈ ಬಗ್ಗೆ recruitment ಆಗಬೇಕು. ಇದು ಸರ್ಕಾರದ ವತಿಯಿಂದಲೇ ನಡೆಯಬೇಕು. ಯಾರಗೋ contract ಕೊಟ್ಟು ಅವನು outsource ಮಾಡಿ ದುಡ್ಡು ಮಡಿಕೊಳ್ಳುವುದಲ್ಲ. ಇದರ ಬಗ್ಗೆ ನಿಮಗೆ ಗೊತ್ತಿದೆಯೇ? ಒಬ್ಬನಿಗೆ 3,500 ಮತ್ತು 4,500 ರೂಪಾಯಿಗಳನ್ನು ಅವರು ಕೊಡುತ್ತಾರೆ. ಇದು ನಿಮ್ಮ ಗಮನಕ್ಕೂ ಕೂಡ ಬಂದಿದೆ. ನೀವು ಅವರಿಗೆ wages ಎಷ್ಟು ಕೊಡುತ್ತಿದ್ದೀರಿ? ಅವನು ಒಬ್ಬೊಬ್ಬನ ಮೇಲೆ ಸುಮಾರು 2,000 ರೂಪಾಯಿಗಳ commission ತಿನ್ನುತ್ತಿದ್ದಾನೆ. ಇವರು ಯಾವ ರೀತಿಯಾಗಿ ಜೀವನವನ್ನು ಸಾಗಿಸಬೇಕು? ಹಳ್ಳಿ ಎಲ್ಲಿ ಬೆಳೆಯಬೇಕು? ಇವರುಗಳು ಪಂಚಾಯಿತಿಯಲ್ಲಿ ಮಲಗುತ್ತಾರೆ. ಚಾವಡಿಯಲ್ಲಿ ಮಲಗುತ್ತಾರೆ. Hospitals ನಲ್ಲಿ ಮಲಗುತ್ತಾರೆ. ಪೊಲೀಸ್ ಸ್ಟೇಷನ್ ಮಗ್ಗಲಿನಲ್ಲಿರುವ ಕಾರಿಡಾರ್‌ನಲ್ಲಿ ಮಲಗುತ್ತಾರೆ.

ಐ.ಬಿ.ಯಲ್ಲಿರುವಂತಹ ಕಾರಿಡಾರ್‌ನಲ್ಲಿ ಮಲಗುತ್ತಾರೆ. ಇವರ ಪರಿಸ್ಥಿತಿಯನ್ನು ತಾವು ಹೋಗಿ ನೋಡಿದ್ದೀರಾ?

ಅಧ್ಯಕ್ಷರು: ಮಾನ್ಯ ಸಚಿವರೆ, ತಾವು ಉತ್ತರವನ್ನು ಹೇಳಿ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ: ನಮ್ಮ ಹಿತದೃಷ್ಟಿಯಿಂದ please don't mistaqke me.ಇದನ್ನು ನಾವು ದಿನನಿತ್ಯ ಕಣ್ಣಾರೆ ನೋಡುತ್ತಿದ್ದೇವೆ. ನಮ್ಮ ಪಂಚಾಯಿತಿಯಲ್ಲಿ ಅವರಿಗೆ ಜಾಗವಿಲ್ಲದೆ ಪಂಚಾಯಿತಿಯ ಒಂದು ಕಾರಿಡಾರ್‌ನಲ್ಲಿ ನಾನು ಮಲಗುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ಅದೇ ರೀತಿಯಾಗಿ ಮುದ್ದೇಬಿಹಾಳ್ ಐ.ಬಿ.ಯಲ್ಲಿ ಮಲಗುವುದಕ್ಕೆ ಸಹ ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಆರೋಗ್ಯ ಸಚಿವರೆ, ತಾವು outsource ಮಾಡಿದ್ದೇವೆಂದು ಕೈತೊಳೆದುಕೊಳ್ಳುವುದಕ್ಕಾಗುವುದಿಲ್ಲ. ಇದು ಜನರ ಹಣವಾಗಿದೆ. ಇದು ಸರ್ಕಾರದ ಹಣ. ನಾವು ಸರ್ಕಾರದ ಹಣವನ್ನು ಖರ್ಚು ಮಾಡುವಾಗ ಇದರಲ್ಲಿ ಸಾಮಾಜಿಕವಾಗಿ ನ್ಯಾಯವು ಇರಬೇಕಾಗುತ್ತದೆ. ನಾವು outsource ಮಾಡಿಬಿಟ್ಟಿದ್ದೇವೆ. ಅಲ್ಲಿ ಯಾರಿಗಾದರೂ ಕೆಲಸವನ್ನು ಕೊಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. It is a contract between you and agency. ತಾವು ಯಾರಿಗೆ outsource ಕೊಟ್ಟಿದ್ದೀರಿ ನಿಮಗೂ ಮತ್ತು ಅವರಿಗೂ ಇರುವ contract ತಾನೆ ಇರುವುದು? ಅದನ್ನು ಮಾಡುವಾಗ ನೀವು ಇದರಲ್ಲಿ reservation policy ಕೂಡ ಅಳವಡಿಸಿಕೊಳ್ಳಬೇಕೆಂದು ಅವರಿಗೆ ಹೇಳಬೇಕು. ಇಲ್ಲದೆ ಹೋದರೆ ಅವರಿಗೆ ಉದ್ಯೋಗದಲ್ಲಿ ಸಾಮಾಜಿಕ ನ್ಯಾಯ ಹೇಗೆ ಸಿಗುತ್ತದೆ? ಇದರಲ್ಲಿ ಬೇಕಾದಷ್ಟು ಜನರು ಬರುತ್ತಾರೆ. ನೀವು ಅದನ್ನು ಮಾಡಿ. ನೀವು ಈ ತರಹ ಉತ್ತರವನ್ನು ಹೇಳಿದರೆ ಹೇಗೆ? ನೀವು ಸಾಮಾಜಿಕ ನ್ಯಾಯದ ಪರವಾಗಿರುವವರು. ನೀವು ಈ ರೀತಿಯಾಗಿ ಮಾಡುವುದಕ್ಕಾಗುತ್ತದೆಯೇ ಇದು ಮುಗಿದ ತಕ್ಷಣವೇ ಇದರಲ್ಲಿ social justice ಆಗಬೇಕು. ಎಲ್ಲರಿಗೂ ಅವಕಾಶ ಸಿಗುವ ಹಾಗೆ ಮಾಡಬೇಕು. ಈ ಕಾರ್ಯಕ್ರಮದಲಿ ಅವನು ಯಾರನ್ನು out-sourcesನಲ್ಲಿ ತೆಗೆದುಕೊಂಡಿದ್ದಾನೆ ಅದು ದುಡ್ಡು

ಹೊಡೆಯುವುದಕ್ಕಲ್ಲ. ಇದರಿಂದ ಬಡವರಿಗೆ ಸಹಾಯವಾಗಬೇಕು. ಅಲ್ಲಿ ಕೆಲಸ ಮಾಡುವವರಿಗೆ ಸಹಾಯವಾಗಬೇಕು. ಅಲ್ಲಿ 24 ಗಂಟೆಗಳ ಕಾಲ ಕೆಲಸ ಮಾಡುವವರಿಗೆ ಇದರಿಂದ ಹೆಚ್ಚು ಅನುಕೂಲವಾಗಬೇಕು. ಆ ತರಹ ಸರ್ಕಾರವು ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ನಾವು outsource ಕೊಟ್ಟಿದ್ದೇವೆ.. ಇದನ್ನು ನಾವು ಮಾಡುವುದಕ್ಕಾಗುವುದಿಲ್ಲ. ಅಲ್ಲಿ reservation policy ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಅರವಿಂದ ಲಿಂಬಾವಳಿ: ನಾನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಆ ರೀತಿಯಾಗಿ ತಪ್ಪು ಅರ್ಥವನ್ನು ಭಾವಿಸುವುದು ಬೇಡ. ನಾವು out-source ಅನ್ನು ಮಾಡುವಾಗ ಕೆಲವು conditions ಗಳನ್ನು ಹಾಕಿದ್ದೇವೆ.

ಶ್ರೀ ಸಿದ್ದರಾಮಯ್ಯ: Conditionsಗಳನ್ನು ಹಾಕಿರುವ ಬಗ್ಗೆ ಎಲ್ಲಿ ಕೊಟ್ಟಿದ್ದೀರಾ? ಅದರಲ್ಲಿ ದಲಿತರಿಗೆ, ಹಿಂದುಳಿದವರಿಗೆ reservation ಇದೆಯಾ?

ಶ್ರೀ ಅರವಿಂದ ಲಿಂಬಾವಳಿ: ಈ ಬಗ್ಗೆ ತಮಗೆ ಮಾಹಿತಿಯನ್ನು ಒದಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ: ಅದರಲ್ಲಿ ಏನೇನು Conditions ಹಾಕಿದ್ದೀರಿ ಆ ಬಗ್ಗೆ ಮಾಹಿತಿಯನ್ನು ಕೊಡಿ.

ಶ್ರೀ ಅರವಿಂದ ಲಿಂಬಾವಳಿ: ತಾನು ತಮಗೆ ಅದನ್ನು ಕಳುಹಿಸಿಕೊಡುತ್ತೇನೆ. ಅಷ್ಟೆ ಅಲ್ಲದೆ ನಮ್ಮ ಪ್ರಧಾನ ಕಾರ್ಯದರ್ಶಿಯವರು ನಾನು ಮಂತ್ರಿಯಾದ ನಂತರ ಆಗಾಗ ಅವರನ್ನು ಕರೆದು salary ವಿಷಯವಾಗಿ ಅವರ service ವಿಷಯವಾಗಿ 3–4 ಸಭೆಗಳನ್ನು ಸಹ ಮಾಡಿದ್ದಾರೆ. ಅಲ್ಲಿ ಏನೇನು ಅನ್ಯಾಯಗಳು ಆಗುತ್ತಿದೆ. ಮಾನ್ಯ ಸದಸ್ಯರಾದ ಸಿ.ಎಸ್. ನಾಡಗೌಡರು ನನ್ನ ಗಮನಕ್ಕೆ ತಂದ ಹಾಗೆ ನನ್ನ ಗಮನಕ್ಕೆ ಬಂದಿರುವಂತಹ ವಿಷಯಗಳನ್ನು ಸಹ ನಾನು ಅವರ ಗಮನಕ್ಕೆ

ತರುತ್ತಿದ್ದೇನೆ. ಇವತ್ತು 24X7service ಮಾಡುತ್ತಿದ್ದಾರೆ. ಆ ರೀತಿಯ service ಅನ್ನು · military service ರೀತಿಯೆಂದು ನಾವು ಭಾವಿಸಬೇಕೆನ್ನುವುದೇ ನನ್ನ ವಾದವಾಗಿದೆ. ಆ ಹಿನ್ನೆಲೆಯೊಳಗೆ ಸರ್ಕಾರ recruitment ಮಾಡಬೇಕು. ಇದೊಂದು permanent project ಆಗಿದೆ. Permanent Programme of the Government,whoever may be in the Government. ಆ ಹಿನ್ನೆಲೆಯೊಳಗೆ ನನ್ನ ಚಿಂತನೆಯಂತೂ ಈ ರೀತಿಯಲ್ಲಿ ಮಾಡುತ್ತಿದ್ದೇನೆ. ಮುಂದೆ ಬರುವಂತಹ ದಿನಗಳಲ್ಲಿ ನಿಮ್ಮೆಲ್ಲರ ಸಲಹೆಯನ್ನು ತೆಗೆದುಕೊಂಡು ಇದರ ಬಗ್ಗೆ ಇನ್ಯಾವುದೇ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿದೆಯೋ ಆ ಎಲ್ಲಾ ಸಂಗತಿಗಳನ್ನು ಮಾಡುವಂತಹ ಕೆಲಸವನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಟಿ.ಬಿ. ಜಯಚಂದ್ರರವರು photo ವಿಚಾರವಾಗಿ ಯಾವುದೇ ರಾಜ್ಯದಲ್ಲಿಯೂ ಕೂಡ ಮಾಜಿ ಪ್ರಧಾನ ಮಂತ್ರಿಗಳಾದ ದಿ. ಶ್ರೀ ರಾಜೀವ್ ಗಾಂಧಿಯವರ photo ಅನ್ನು ಹಾಕಿರುವುದಿಲ್ಲ ಎಂದು ಹೇಳಿದರು. ಆಂಧ್ರಪ್ರದೇಶದ 108 ಸಂಖ್ಯೆಯ ವಾಹನವನ್ನು ಹೋಗಿ ನೋಡಿ, ಅವರ photo ಅನ್ನು ಹಾಕಿದ್ದಾರೆ. ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಆದರೆ ಅಲ್ಲಿ ರಾಜೀವ್ ಗಾಂಧಿಗೆ ಏನು ಸಂಬಂಧವಿದೆ. ಅಲ್ಲಿ ರಾಜೀವ್ ಗಾಂಧಿಯವರ photo ಅನ್ನು 108 ಸಂಖ್ಯೆಯ ವಾಹನದ ಮೇಲೆ ಇವತ್ತು ಹಾಕಿಕೊಂಡು ಓಡಿಸುತ್ತಿದ್ದಾರೆ. ಇದರಲ್ಲಿ ರಾಜಕೀಯವನ್ನು ನೀವು ಮಾಡುತ್ತಿದ್ದೀರಾ ಅಥವಾ ನಾವು ಮಾಡುತ್ತಿದ್ದೇವಾ?

ಅಧ್ಯಕ್ಷರು: ಆಯಿತು, ಇದನ್ನು ಈಗ ಮುಕ್ತಾಯ ಮಾಡೋಣ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ: ಆಂಧ್ರಪ್ರದೇಶದಲ್ಲಿ ಶಾಸಕರಾಗಿಲ್ಲ. ಅಲ್ಲಿ ಅವರು ಹೋಗಿ ಚರ್ಚೆ ಮಾಡಲಿ. ಈ ಬಗ್ಗೆ ನಮಗೆ ಹೇಳಿದರೆ ಏನು ಪ್ರಯೋಜನ?

ಶ್ರೀ ಅರವಿಂದ ಲಿಂಬಾವಳಿ: ಅಲ್ಲಿ ನಿಮ್ಮ ಪಕ್ಷದ ಸರ್ಕಾರವಿದೆ. ಈ ಬಗ್ಗೆ ದಯವಿಟ್ಟು ನಿಮ್ಮ ಸಲಹೆಯನ್ನು ಅವರಿಗೆ ಕಳುಹಿಸಿಕೊಡಿ.

ಶ್ರೀ ಸಿದ್ದರಾಮಯ್ಯ: ನೀವು ಆ ತರಹ ಅಲ್ಲಿ follow ಮಾಡಬೇಕೆಂದು ಏನೂ ಇಲ್ಲ. ಆಂಧ್ರದಲ್ಲಿ ಮಾಡಿದ್ದಾರೆಂದು ಕರ್ನಾಟಕದಲ್ಲಿ ಇದನ್ನು ಅನುಸರಿಸಬೇಕೆಂದು ಏನೂ ಇಲ್ಲ.

ಅಧ್ಯಕ್ಷರು: ಆಯಿತು. ಇದನ್ನು ಈಗ ಮುಕ್ತಾಯ ಮಾಡೋಣ.

ಶ್ರೀ ಸಿದ್ದರಾಮಯ್ಯ: ಮಾನ್ಯ ಸಚಿವರೆ, ಯಾವುದಕ್ಕೋ ಏನೇನೋ ಹೇಳಿದರೆ ಹೇಗೆ?

ಅಧ್ಯಕ್ಷರು: ಈಗ ಎನ್.ಎ. ಹ್ಯಾರೀಸ್‌ರವರೆ, ತಾವು ಪ್ರಶ್ನೆಯನ್ನು ಕೇಳಿ.

ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುದಾನ 1568
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 8 (31)

ಶ್ರೀ ಎನ್.ಎ. ಹ್ಯಾರೀಸ್ (ಶಾಂತಿನಗರ ಕ್ಷೇತ್ರ)

ಅ) ರಾಜ್ಯದಲ್ಲಿ ಈಗಾಗಲೇ ಅನುಮತಿ ನೀಡಿರುವ ಇನ್ನು ಮುಂದೆ ಅನುಮತಿ ನೀಡಲು ಉದ್ದೇಶಿಸಿರುವ ಖಾಸಗಿ ವಿಶ್ವವಿದ್ಯಾಲಯಗಳು, ಸಂಸ್ಥೆಗಳು ಯಾವುವು (ಹೆಸರು ಸಹಿತ ವಿವರ ನೀಡುವುದು).

ಆ) ಖಾಸಗಿ ವಿಶ್ವವಿದ್ಯಾಲಯ ಅನುಮತಿ ನೀಡುವಾಗ ವಿಧಿಸಲಾಗಿರುವ ಷರತ್ತುಗಳೇನು;

ಇ) ಖಾಸಗಿ ಸಂಸ್ಥೆಗಳ ಸಹಭಾಗಿತ್ವದಿಂದ ಶಿಕ್ಷಣ ಕ್ಷೇತ್ರಕ್ಕೆ ಒದಗಿ ಬರುವ ಪ್ರತಿಫಲಗಳೇನು? (ವಿವರ ನೀಡುವುದು)

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಈಗಾಗಲೇ ಅನುಮತಿ ನೀಡುರವ ಖಾಸಗಿ ವಿಶ್ವವಿದ್ಯಾಲಯಗಳು:

1) ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯ
2) ಅಲೈಯನ್ಸ್ ವಿಶ್ವವಿದ್ಯಾಲಯ:

ಅನುಮತಿ ನೀಡಲು ಉದ್ದೇಶಿಸಿರುವ ಖಾಸಗಿ ವಿಶ್ವವಿದ್ಯಾಲಯಗಳು: